  

**ಚಟುವಟಿಕೆ 7: ನಮ್ಮ ಸುತ್ತಲೂ ಸಿಗುವ ವಸ್ತುಗಳಿಂದ ನಮಗೆ ಇಷ್ಟವಾದ ಪ್ರಾಣಿಯನ್ನು 3D ಆಕೃತಿಯ ಮುಖಾಂತರ ಮಾಡುವುದು.**

**ವಯಸ್ಸು:** 6 ವರ್ಷ ಮತ್ತು ಮೇಲ್ಪಟ್ಟವರು

**ವಸ್ತುಗಳು:**. ಮಡಿಕೆ, ಪಾತ್ರೆಗಳು, ಬಾಟಲಗಳು, ಬಾಟಲ್ ಕ್ಯಾಪ್ಗಳು, ರಟ್ಟಿನ ಪೆಟ್ಟಿಗೆ, ಚೀಲಗಳು, ಹಳೆಯ ಪುಸ್ತಕಗಳು, ಪತ್ರಿಕೆಗಳು, ಇತ್ಯಾದಿ.

**ಹಂತ 1: ನಿಮ್ಮ ಮನೆಯ ಸುತ್ತಲೂ ನೋಡಿ ಮತ್ತು ನಿಮಗೆ ಇಷ್ಟವಾದ ಪ್ರಾಣಿಯನ್ನು 3D ಆಕೃತಿಯ ಮುಖಾಂತರ ರಚಿಸಲು ಬೇಕಾದ ವಸ್ತುಗಳನ್ನು ಹುಡುಕಿ.**

**ನೆನಪಿಡಬೇಕಾದ ಅಂಶಗಳು:**

1. ನಿಮ್ಮೊಂದಿಗೆ ಚಟುವಟಿಕೆಯನ್ನು ಮಾಡಲು, ಒಬ್ಬ ಸ್ನೇಹಿತ ಅಥವಾ ಅಣ್ಣ-ತಮ್ಮ, ಅಕ್ಕ-ತಂಗಿಯನ್ನು ಆರಿಸಿಕೊಳ್ಳಿ.
2. ಅವರಿಗೂ ಸಹ ಅದೇ ಚಟುವಟಿಕೆಯನ್ನು ಪ್ರತ್ಯೇಕವಾಗಿ ಮಾಡಲು ಹೇಳಿ.
3. ನಿಮಗೆ ಇಷ್ಟವಾದ ಪ್ರಾಣಿಯ ಚಿತ್ರವನ್ನು ತೆಗೆದುಕೊಳ್ಳಿ ಮತ್ತು ಅದರ ದೇಹದ ವಿವಿಧ ಭಾಗಗಳನ್ನು ಸೂಕ್ಷ್ಮವಾಗಿ ಗಮನಿಸಿ.

4. ನಿಮಗೆ ಇಷ್ಟವಾದ ಪ್ರಾಣಿಯನ್ನು ರಚಿಸಲು ಬಳಸಬಹುದಾದ ವಸ್ತುಗಳನ್ನು ಮನೆಯ ಸುತ್ತಲೂ ಹುಡುಕಿ ನೋಡಿ. ನೀವು ಮಾಡಿದ ಪ್ರಾಣಿಯನ್ನು ನೆಲದ ಮೇಲೆ ನಿಲ್ಲುವಂತೆ ಮಾಡಬಹುದು ಅಥವಾ ಗೋಡೆಗೆ ಒರಗಿಸಿ ನಿಲ್ಲಿಸಬಹುದು.
5. 3D ಪ್ರಾಣಿಯನ್ನು ರಚಿಸಲು ನೀವು ಬಳಸಬಹುದಾದ ಕನಿಷ್ಠ 5 ವಿಭಿನ್ನ ವಸ್ತುಗಳನ್ನು ಹುಡುಕಿ.
6. ಪ್ರಾಣಿಯ ದೇಹದ ದೊಡ್ಡ ಭಾಗದಿಂದ ಪ್ರಾರಂಭಿಸಿ ಹಾಗೂ ಇತರ ಭಾಗಗಳನ್ನು ಹೊಂದಿಸಿ.
7. ನಂತರ ದೇಹದ ಇತರ ಸೂಕ್ಷ್ಮ ಭಾಗಗಳಾದ ಕಣ್ಣು-ಕಿವಿ ಮೂಗು ಇತ್ಯಾದಿ ಭಾಗಗಳನ್ನು ಹೊಂದಿಸಲು ಪ್ರಯತ್ನಿಸಿ.

## ನಿಮ್ಮ ಚಟುವಟಿಕೆಯ ಭಾಗೀದಾರರೊಂದಿಗೆ ಮಾಡಬಹುದಾದ ಅಂಶಗಳು :

1. ಚಟುವಟಿಕೆ ಪೂರ್ಣಗೊಂಡ ನಂತರ ಇಬ್ಬರು ರಚಿಸಿರುವ ಪ್ರಾಣಿಗಳನ್ನು ಒಬ್ಬರಿಗೊಬ್ಬರು ತೋರಿಸಿ.
2. ಇಬ್ಬರು ಪ್ರಾಣಿಗಳನ್ನು ನೋಡಿದ ನಂತರ ಏನಾದರೂ ಹೆಚ್ಚಿನ ವಿವರಗಳನ್ನು ಸೇರಿಸಬೇಕು ಎಂದು ನಿಮಗೆ ಅನಿಸಿದರೆ ನಿಮ್ಮ ಭಾಗೀದಾರರ ಜೊತೆ ಅದನ್ನು ಧನಾತ್ಮಕವಾಗಿ ಹಂಚಿಕೊಳ್ಳಿ ಮತ್ತು ಪ್ರಾಣಿಯ 3D ಆಕೃತಿಯನ್ನು ಪೂರ್ಣಗೊಳಿಸಿ.

*ArtSparks Foundation*

www.art-sparks.org